5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10011/2021

ಪಿಡಬ್ಲ್ಯೂ 07
ಸಿಡಬ್ಲ್ಯೂ 07

| | | |
|---|---|---|
| ಸಾಕ್ಷಿ ಹೆಸರು | - | ವೀರೇಂದ್ರ ಗೌಡ |
| ತಂದೆ ಹೆಸರು | - | ಸೋಮಶೇಖರಗೌಡ |
| ವಯಸ್ಸು | - | 50 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸ: | - | ಮಳಲಗದ್ದೆ ಗ್ರಾಮ , ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕ: 18-11-2022.

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರವರಿಂದ:

ನನಗೆ ಪ್ರಾಸಾ -1 ರವರು ನನಗೆ ಗೊತ್ತು. ಆರೋಪಿತರು ಗೊತ್ತು. ಪ್ರಾ ಸಾ -5 ಮತ್ತು ಪ್ರಾ ಸಾ -6 ರವರು ಗೊತ್ತು. ಪೋಲೀಸರು ಈ ಕೇಸಿಗೆ ಸಂಬಂಧಪಟ್ಟಂತೆ ಪಂಚನಾಮೆ ಮಾಡಿದ ಬಗ್ಗೆ ಗೊತ್ತಿದೆ. ಸುಮಾರು 6-7 ವರ್ಷಗಳ ಹಿಂದೆ ನಾನು ರಸ್ತೆಯಲ್ಲಿ ಹೋಗುತ್ತಿದ್ದಾಗ ಸಾಗರ ಗ್ರಾಮಾಂತರ ಪೋಲೀಸ್ ಠಾಣೆ ನನ್ನನ್ನು ಕರೆದು ನನ್ನನ್ನು ನಿಲ್ಲಿಸಿ ಒಂದು ಫೋಟೋವನ್ನು ತೆಗೆದಿರುತ್ತಾರೆ. ಪೋಲಿಸೇರು ನನಗೆ ಯಾವುದೇ ನೋಟೀಸ್ ನ್ನು ಜಾರಿ ಮಾಡಿಲ್ಲ.

ಸಾಕ್ಷಿಗೆ ಸದರಿ ನೋಟೀಸ್ ನ್ನು ತೋರಿಸಿದ್ದು ಸಾಕ್ಷಿಯು ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹಜರ್ ನ್ನು ಈಗಾಗಲೇ ನಿಪಿ -6 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ -6(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ರಸ್ತೆಯ ಮೇಲೆ ಹೋಗುತ್ತಿದ್ದಾಗ ರಸ್ತೆಯ ಮೇಲೆ ಹಾಕಿರುತ್ತೇನೆ. ಸ್ಥಳದಲ್ಲಿ ಯಾರಿಗೆ ಯಾರ ನಡುವೆ ಗಲಾಟೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೋಲಿಸೇರು ನನ್ನನ್ನು ಕರೆಸಿ ಸಹಿ ಮಾಡಲು ಹೇಳಿದ್ದು ನಾನು ಸಹಿ ಮಾಡಿರುತ್ತೇನೆ. ಗಲಾಟೆಯಾದ ಸ್ದಳವನ್ನು ಪೋಲೀಸರಿಗೆ ಯಾರು ತೋರಿಸಿದರು ಎಂದು ಗೊತ್ತಿಲ್ಲ . ಪೋಲೀಸರು ಮು ಮಾ -4 ನ್ನು ಹಿಡಿದುಕೊಂಡು

ನಿಂತುಕೊಂಡು ನನ್ನನ್ನ ನಿಲ್ಲಿಸಿ ಒಂದು ಫೋಟೋವನ್ನು ತೆಗೆಸಿರುತ್ತಾರೆ. ಮಹಜರ್ ನ್ನು ಮದ್ಯಾಹ್ನ 12 ಗಂಟೆಗೆ ಬರೆದಿರುತ್ತಾರೆ. ಸಾಕ್ಷಿಗೆ ನಿಪಿ 6 ಮಹಜರ್ ನ್ನು ತೋರಿಸಿದ್ದು ಸಾಕ್ಷಿಯು ಮಹಜರ್ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹಜರ್ ನ್ನು ಈಗಾಗಲೇ ನಿಪಿ -5 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ -5(ಸಿ) ಎಂದು ಗುರುತಿಸಲಾಯಿತು. ಪೋಲೀಸರು ಮಹಜರ್ ನ್ನು ಬಿಟ್ಟು ಬೇರೆ ಏನೂ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-8 ಫೋಟೋದಲ್ಲಿ ನಾನೂ ಸಹ ಕಂಡುಬರುತ್ತೇನೆ, 1 ನೇ ಆರೋಪಿ ಕಂಡುಬಂದಿದ್ದು ಅವರು ಬಂದೂಕು ಹಿಡಿದು ನಿಂತಿರುತ್ತಾರೆ.

ಸಾಕ್ಷಿಗೆ ಮು ಮಾ -4 ಬಂದೂಕನ್ನು ತೋರಿಸಿದ್ದು ಮು ಮಾ -4 ಬಂದೂಕನ್ನು ನಾನು ಮಹಜರ್ ಸಮಯದಲ್ಲಿ ನೋಡಿದಂತಹ ಬಂದೂಕು ಆಗಿರುವುದಿಲ್ಲ. ನಿಪಿ -7 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ -7(ಸಿ) ಎಂದು ಗುರುತಿಸಲಾಯಿತು. ನಿಪಿ -7 ಕ್ಕೆ ಸಹಿಯನ್ನು ನಿಪಿ -5 ಕ್ಕೆ ಸಹಿ ಹಾಕಿದ ಸ್ದಳದಲ್ಲಿ ಮಾಡಿರುತ್ತೇನೆ. ನಿಪಿ -5 ಮತ್ತು ನಿಪಿ -7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿನಾಂಕಃ16-03-2016 ರಂದು ಸ್ದಳ ಪಂಚನಾಮೆಗೆ ಸಹಕಾರ ಮಾಡಬೇಕು ಎಂದು ಸಾಗರ ಗ್ರಾಮಾಂತರ ಪೋಲೀಸರು ನಿಪಿ -6 ರಂತೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಅದೇ ದಿನ ಪ್ರಾ ಸಾ -1 ರವರ ಹಿಸ್ಸೆಗೆ ಹೋದ ಹೆಬ್ಬರಿಗೆ ಗ್ರಾಮದಲ್ಲಿರುವ ಹಕ್ಕಲು ಜಮೀನಿನಲ್ಲಿ ಆರೋಪಿತರು ಮತ್ತು ಪ್ರಾ ಸಾ -1 ರವರಿಗೆ ಗಲಾಟೆಯಾಗಿದ್ದು ಗಲಾಟೆಯಾದ ಸ್ದಳವನ್ನು ಪ್ರಾ ಸಾ 5 ರವರು ನನ್ನ ಮತ್ತು ಪ್ರಾ ಸಾ - 6 ರವರ ಎದುರು ಪೋಲಿಸರಿಗೆ ತೋರಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಮು ಮಾ -4 ಬಂದೂಕು ಮತ್ತು ಈಗ ತೋರಿಸಿದ ರಟ್ಟಿನ ಪೆಟ್ಟಿಗೆಯಲ್ಲಿರುವ ಸೀಸದ ಗುಂಡುಗಳನ್ನು

ನನ್ನ ಸಮಕ್ಷಮ 1ನೇ ಆರೋಪಿಯು ಪೋಲೀಸರ ಮುಂದೆ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ.

ಆ ಬಗ್ಗೆ ಮಹಜರ್ ನ್ನು ಮದ್ಯಾಹ್ನ 1 ರಿಂದ 2 ಗಂಟೆ ವರೆಗೆ ಬರೆದು ನಿಪಿ -5 ಮಹಜರ್ ನ್ನು  ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ -5 ರ ಕಾಲಕ್ಕೆ ನಿಪಿ -7 ಸ್ಕೆಚ್ ಮಾಡಿರುತ್ತಾರೆ ಅದರಲ್ಲಿರುವ ವಿಷಯವನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ -8  ಫೋಟೋದಲ್ಲಿ 1ನೇ ಆರೋಪಿ ಬಂದೂಕು ಹಿಡಿದು ನಿಂತಿದ್ದಾರೆ ಎಂದರೆ ಹೌದು. ನಿಪಿ -8 ರಲ್ಲಿ ಪೋಲೀಸ್ ಜೀಪಿನಿಂದ ಬಂದೂಕು ತರುವುದು ಕಂಡುಬರುತ್ತಿಲ್ಲ ಎಂದರೆ ಹೌದು.

ನಿಪಿ -5 ರ ವಿಷಯ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಪರಿಚಯ ಇದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).